ಶ್ರೀ ವಾಟಾಳ್ ನಾಗರಾಜ್: ನಾನು ಏನು ಹೇಳುತ್ತೇನೆ ಎಂದರೆ ಸರ್ಕಾರ ನೇರವಾಗಿ ಹೇಳಬೇಕು. ರಾಷ್ಟ್ರೀಕರಣ ಮಾಡದೇ ಇರತಕ್ಕಂಥ ಕಾರಣವೇನು? ನಿಮಗೆ ತೊಂದರೆ ಇರತಕ್ಕಂಥಾದ್ದು ಏನು? ಅದನ್ನು ಹೇಳಬೇಕಲ್ಲಾ ನೀವು, ನಮಗೆ ಇಂತಿಂತಹ ತೊಂದರೆ ಇದೆ ಎಂದು. ಇಲ್ಲದೆ ಇದ್ದರೆ ಏನಾಗುತ್ತದೆ ಎಂದರೆ ನೀವು ಖಾಸಗಿ ಕಾಲೇಜ್‌ನವರಿಗೆ ಒತ್ತಾಯವಾಗಿದ್ದೀರಿ. ಅವರ ಬೆಂಬಲವಾಗಿದ್ದೀರಿ. ನೀವು ಬಡ ವಿದ್ಯಾರ್ಥಿಗಳ ಪರ ಇಲ್ಲ ಎಂದು ಬರುತ್ತದೆ. ನೀವು ರಾಷ್ಟ್ರೀಕರಣ ಮಾಡುವುದಕ್ಕೆ ಇರತಕ್ಕಂಥ ತೊಂದರೆ ಏನು? ದಯವಿಟ್ಟು ಅದನ್ನು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್: ರಾಷ್ಟ್ರೀಕರಣ ಏಕೆ ಮಾಡಲಿಲ್ಲವೆಂದರೆ ಕಾನೂನು ಇಲ್ಲದೆ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತೇವೆ. ಕಾರಣವೇನೆಂದರೆ, ಅದನ್ನು ಇವತ್ತು ದೇಶದಲ್ಲಿ ಒಪ್ಪುವುದಿಲ್ಲ. ದೇಶದ ಕೋರ್ಟುಗಳು ಒಪ್ಪುವುದಿಲ್ಲ. ನಾವೇ ಇವತ್ತು ಅಡ್ಮಿಷನ್ ರೂಲ್ಸ್ ಮಾಡಿದರೆ, ಅವು ಯಾವ್ಯಾವ ಕೋರ್ಟ್‌ನಲ್ಲಿ ಯಾವ್ಯಾವ ರೀತಿಯಾಗಿ ಇವತ್ತು ವಿರೋಧವಾಗಿರತಕ್ಕಂಥ ಆದೇಶ, ತೀರ್ಪುಗಳನ್ನು ಆಹ್ವಾನ ಮಾಡುತ್ತವೆ ಎಂಬುದನ್ನು ತಾವು ಗಮನಿಸಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಇಬ್ಬರೂ ಒಂದಾಗಿ ತೀರ್ಪು ತೆಗೆದುಕೊಳ್ಳುವುದೂ ಉಂಟು. ಇಬ್ಬರೂ ಒಟ್ಟಿಗೆ ಸೇರಿ ತೀರ್ಪು ಬರೆಸಿಕೊಳ್ಳತಕ್ಕಂಥಾದ್ದೂ ಉಂಟು. ಆ ತೀರ್ಪುಗಳು ಯಾವ ರೀತಿ ಬರುತ್ತದೆ ಎಂದು ಹೇಳಿ ಈಗ ಮಾತನಾಡುವುದು ಬೇಡ. ಸರ್ಕಾರ ರಾಷ್ಟ್ರೀಕರಣ ಬದ್ಧವಾಗಿದೆಯೋ ಇಲ್ಲವೆ? ಮಾಡುತ್ತೀರಾ? ಇಲ್ಲಪೇ, ಅದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ಬ್ಯಾಂಕುಗಳನ್ನು ಮಾಡಿದ್ದೀರಿ. ಬಸ್ಸುಗಳನ್ನು ಮಾಡಿದ್ದೀರಿ. ಲ್ಯಾಂಡ್ ಫಾರ್ಮ್ಸ್ ಮಾಡಿದ್ದೀರಿ. ಇದನ್ನು ಮಾಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಉಪಾಧ್ಯಕ್ಷರೆ, ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆ ಯಾವುದೂ ಇಲ್ಲ. ಅದನ್ನು ಮುಂದೆ ಪರಿಶೀಲನೆ ಮಾಡಿ ನೋಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ರಾಷ್ಟ್ರೀಕರಣ ಮಾಡುತ್ತಿಲ್ಲ. ಬಡ ವಿದ್ಯಾರ್ಥಿಗಳ ಪರ ಇಲ್ಲ. ನೀವು 50:50 ಹೊಂದಾಣಿಕೆ ಮಾಡಿಕೊಂಡಿದ್ದೀರಿ. ನೀವು ಮತ್ತು ಖಾಸಗಿ ಕಾಲೇಜು ಒಟ್ಟಾಗಿ ಸೇರಿದ್ದೀರಿ. ಹೊಂದಾಣಿಕೆ ಮಾಡಿಕೊಂಡಿದ್ದೀರಿ. ಒಗ್ಗಟ್ಟಾಗಿದ್ದೀರಿ. ಬಡ ವಿದ್ಯಾರ್ಥಿಗಳ ಪರ ನಿಮ್ಮ ಸರ್ಕಾರ ಇಲ್ಲವೆಂದು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಸಭಾತ್ಯಾಗ ಮಾಡಿದರು).

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪ್ರಧಾನಮಂತ್ರಿಗಳ ಗ್ರಾಮೋದಯ ಮತ್ತು ನವಗ್ರಾಮ ಯೋಜನೆಯ ವಿವರ

646 (6507) **ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ):** ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಪ್ರಧಾನಮಂತ್ರಿ ಗ್ರಾಮೋದಯ, ಹಾಗೂ ನವಗ್ರಾಮ ಯೋಜನೆಯಡಿಯಲ್ಲಿ ನಿರ್ಮಿಸಿ ಹಂಚಿದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಸಂಖ್ಯೆ ನೀಡುವುದು;

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಯೋಜನೆಗಳಡಿಯಲ್ಲಿ ಹಂಚಲಾದ ಮನೆಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು):

ಇ) ಈ ಯೋಜನೆಯಡಿಯಲ್ಲಿನ ಬಂಟ್ವಾಳ್ ತಾಲ್ಲೂಕಿನ ಗ್ರಾಮ ಪಂಚಾಯತ್‌ವಾರು ನೀಡಲಾದ ಮನೆಗಳ ವಿವರಗಳೇನು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ಅಂದರೆ 2002–03, 2003–04 ಮತ್ತು 2004–05ನೇ ಸಾಲಿನಲ್ಲಿ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಮತ್ತು ನವಗ್ರಾಮ ಆಶ್ರಯ ಯೋಜನೆಯಡಿಯಲ್ಲಿ ಈ ಕೆಳಗಿನಂತೆ ಮನೆಗಳನ್ನು ನಿರ್ಮಿಸಿ ಹಂಚಿದೆ.

ಯೋಜನೆ	ಪೂರ್ಣಗೊಳಿಸಿ ಹಂಚಿದ ಮನೆಗಳು
ಪ್ರಧಾನಮಂತ್ರಿ ಗ್ರಾಮೋದಯ	20220
ನವಗ್ರಾಮ ಆಶ್ರಯ ವಸತಿ ಯೋಜನೆ	55309

1), 2), 3) ಜಿಲ್ಲಾವಾರು ಮಾಹಿತಿ ಅನುಬಂಧ 'ಅ' ದಲ್ಲಿ ನೀಡಲಾಗಿದೆ.

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಹಂಚಲಾದ ಮನೆಗಳ ವಿವರ ಈ ಕೆಳಗಿನಂತಿದೆ. (2002–03ರಿಂದ 2004–05ರವರೆಗೆ)

ಜಿಲ್ಲೆ	ಯೋಜನೆ	ಹಂಚಲಾದ ಮನೆಗಳು (ಗುರಿ)
ದಕ್ಷಿಣ ಕನ್ನಡ	ಪ್ರಧಾನ ಮಂತ್ರಿ ಗ್ರಾಮೋದಯ	400
ಉಡುಪಿ	ಪ್ರಧಾನ ಮಂತ್ರಿ ಗ್ರಾಮೋದಯ	202
ದಕ್ಷಿಣ ಕನ್ನಡ	ನವಗ್ರಾಮ ಆಶ್ರಯ	612
ಉಡುಪಿ	ನವಗ್ರಾಮ ಆಶ್ರಯ	562

ತಾಲ್ಲೂಕುವಾರು ವಿವರ ಅನುಬಂಧ 'ಆ' ದಲ್ಲಿ ಲಗತ್ತಿಸಿದೆ.

ಇ) ಬಂಟ್ವಾಳ್ ತಾಲ್ಲೂಕಿಗೆ 2002–03ರಿಂದ 2004–05ರ ಅವಧಿಯಲ್ಲಿ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ 78 ಮನೆಗಳನ್ನು ಮತ್ತು ನವಗ್ರಾಮ ಆಶ್ರಯ ವಸತಿ ಯೋಜನೆಯಡಿಯಲ್ಲಿ 208 ಮನೆಗಳನ್ನು ನೀಡಲಾಗಿದೆ. ಗ್ರಾಮ ಪಂಚಾಯತವಾರು ನೀಡಲಾದ ಮನೆಗಳ ವಿವರ ಅನುಬಂಧ 'ಇ' ಲಗತ್ತಿಸಿದೆ.

ಅನುಬಂಧ – ಅ

2002–03 ರಿಂದ 2004–05 ಸಾಲಿನವರೆಗೆ ನಿರ್ಮಿಸಿ ಹಂಚಿದ ಮನೆಗಳು

Sl. No.	District	PMGAY	NAHS
1	2	3	4
1.	Bagalkot	597	1609
2.	Bangalore Rural	1213	2204
3.	Bangalore Urban	323	295

1	2	3	4
4.	Belgaum	1497	6378
5.	Bellary	1185	3130
6.	Bidar	720	320
7.	Bijapur	536	1217
8.	Chamarajanagar	452	1089
9.	Chikmagalur	743	1182
10.	Chitradurga	1661	2210
11.	Dakshina Kannada	761	754
12.	Davanagere	1327	3294
13.	Dharwad	336	1697
14.	Gadag	209	2034
15.	Gulbarga	615	2353
16.	Hassan	309	1844
17.	Haveri	428	2415
18.	Kodagu	177	250
19.	Kolar	1098	1241
20.	Koppal	844	2795
21.	Mandya	551	1033
22.	Mysore	480	3012
23.	Raichur	1204	945
24.	Shimoga	1136	3306
25.	Tumkur	1262	5026
26.	Uttara Kannada	310	2711
27.	Udupi	246	965
	Total	**20220**	**55309**

ಅನುಬಂಧ – ಆ

ಪ್ರಧಾನಮಂತ್ರಿ ಗ್ರಾಮೋದಯ ವಸತಿ ಯೋಜನೆ (ದಕ್ಷಿಣ ಕನ್ನಡ)

ಕ್ರ. ಸಂ.	ತಾಲ್ಲೂಕು	2002–03	2003–04	2004–05	ಒಟ್ಟು
1.	ಮಂಗಳೂರು	23	23	13	71
2.	ಬಂಟ್ವಾಳ	27	27	24	78
3.	ಬೆಳ್ತಂಗಡಿ	27	27	28	80
4.	ಪುತ್ತೂರು	15	27	35	77
5.	ಸುಳ್ಯ	27	28	37	84
	ಒಟ್ಟು	**125**	**138**	**137**	**400**

ಪ್ರಧಾನ ಮಂತ್ರಿ ಗ್ರಾಮೋದಯ ವಸತಿ ಯೋಜನೆ (ಉಡುಪಿ)

ಕ್ರ. ಸಂ.	ತಾಲ್ಲೂಕು	2002–03	2003–04	2004–05	ಒಟ್ಟು
1.	ಉಡುಪಿ	33	33	10	81
2.	ಕುಂದಾಪುರ	31	32	15	78
3.	ಕಾರ್ಕಳ	23	17	3	43
	ಒಟ್ಟು	**87**	**87**	**28**	**202**

ನವಗ್ರಾಮ ಆಶ್ರಯ (ದಕ್ಷಿಣ ಕನ್ನಡ)

ಕ್ರ ಸಂ.	ತಾಲ್ಲೂಕು	2002–03	2003–04	2004–05	ಒಟ್ಟು
1.	ಮಂಗಳೂರು	43	5		48
2.	ಬಂಟ್ವಾಳ	191	17		208
3.	ಬೆಳ್ತಂಗಡಿ	0	21	ಗುರಿ ನಿಗದಿ	21
4.	ಪುತ್ತೂರು	20	20	ಪಡಿಸಿರುವುದಿಲ್ಲ	40
5.	ಸುಳ್ಯಾ	174	121		295
	ಒಟ್ಟು	**433**	**179**	**0**	**612**

ನವಗ್ರಾಮ ಆಶ್ರಯ (ಉಡುಪಿ)

ಕ್ರ. ಸಂ.	ತಾಲ್ಲೂಕು	2002–03	2003–04	2004–05	ಒಟ್ಟು
1.	ಉಡುಪಿ	63	30	ಗುರಿ ನಿಗದಿ	93
2.	ಕುಂದಾಪುರ	223	30	ಪಡಿಸಿರುವುದಿಲ್ಲ	253
3.	ಕಾರ್ಕಳ	138	79		218
	ಒಟ್ಟು	**424**	**138**		**562**

ಅನುಬಂಧ–ಇ

ಪ್ರಧಾನ ಮಂತ್ರಿ ಗ್ರಾಮೀಣ ವಸತಿ ಯೋಜನೆ

ವರ್ಷ	ಗ್ರಾಮ ಪಂಚಾಯತ್ ಹೆಸರು	ಹೊಸ ಮನೆ	ದುರಸ್ತಿ	ಒಟ್ಟು
2002–03	ವೀರಕಂಬ	18	0	18
	ಗೋಳ್ತಮಜಲು	0	9	9
2003–04	ಸರಪಾಡಿ	18	9	27
2004–05	ಅನಂತಾಡಿ	16	0	16
	ಪಂಜಿಕಲ್ಲು	0	8	8

ನವಗ್ರಾಮ ಆಶ್ರಯ ವಸತಿ ಯೋಜನೆ

ವರ್ಷ	ಗ್ರಾಮ ಪಂಚಾಯತ್ ಹೆಸರು	ನೀಡಲಾದ ಗುರಿ	ಪೂರ್ಣ ಗೊಂಡ ಮನೆ	ಪ್ರಗತಿಯಲ್ಲಿ ಇರುವ ಮನೆ	ಪ್ರಾರಂಭಿಸಲು ಬಾಕಿ ಇರುವ ಮನೆ
2002–03	ಪೆರುವಾಯಿ	25	19	6	0
	ಮಾಣಿಲ	25	23	2	0
	ವಿಟ್ಲ	41	41	0	0
	ಬಾಳೆಮಣೆ	35	35	0	0
	ಕುರ್ನಾಡು	35	35	0	0
	ಪಜೀರು	30	1	29	0
	ಒಟ್ಟು	**191**	**154**	**37**	**0**
2003–04	ಕರಿಯಂಗಳ	17	0	17	0
2004–05		ಗುರಿ ನಿಗದಿ ಪಡಿಸಿರುವುದಿಲ್ಲ			
ಒಟ್ಟು		**208**	**154**	**54**	**0**

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. 'ಕಳೆದ ಮೂರು ವರ್ಷಗಳಿಂದ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ ಮತ್ತು ನವಗ್ರಾಮ ಯೋಜನೆಯಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿ ಹಂಚಲಾಗಿದೆ'? ಎಂದು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಅದು ಪ್ರತಿ ಜಿಲ್ಲೆ ಮತ್ತು ತಾಲ್ಲೂಕಿಗೆ ಎಷ್ಟೆಷ್ಟು ಮನೆಗಳನ್ನು ಕೊಟ್ಟಿದ್ದೇವೆಂದು ಅದರಲ್ಲಿ ಕೊಟ್ಟಿದ್ದಾರೆ. ನಾನು ಮುಖ್ಯವಾಗಿ ಕೇಳುತ್ತಿರುವುದು ಈ ಮನೆಗಳನ್ನು ಕಟ್ಟಿ ಕೊಟ್ಟ ಮೇಲೆ, ಅವುಗಳಿಗೆ ಬೇಕಾದಂತಹ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಮತ್ತು ವಿದ್ಯುತ್ ದೀಪ ಇವುಗಳನ್ನು ಒದಗಿಸುವಂತಹ ಯೋಜನೆ ಅದರಲ್ಲಿ ಇದೆಯೇ?

ಶ್ರೀ ಅಂಜನಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು 2002ರಿಂದ 2005ರವರೆಗೆ ಯಾವ್ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಮನೆಗಳನ್ನು ಜಿಲ್ಲಾವಾರು, ತಾಲ್ಲೂಕುವಾರು ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. ಈಗ ಹೊಸದಾಗಿ ಅವರು ಮೂಲಭೂತ ಸೌಕರ್ಯವನ್ನು ಯಾವ ರೀತಿ ಒದಗಿಸಿದ್ದೀರಾ ಎಂದು ಕೇಳುತ್ತಿದ್ದಾರೆ. ಆದರೆ ಅವರ ಪ್ರಶ್ನೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತಹ ವಿಚಾರ ಇಲ್ಲ. ಆದರೂ ಕೂಡ ರಾಜ್ಯದಲ್ಲಿ 2002ರಿಂದ 2005ರವರೆಗೆ ನವಗ್ರಾಮ ಆಶ್ರಯ ಯೋಜನೆ ಅಡಿಯಲ್ಲಿ 92,756 ಮನೆಗಳ ಗುರಿಯನ್ನು ಸರ್ಕಾರ ನಿಗದಿ ಪಡಿಸಿತ್ತು. ಈ ಪೈಕಿ 55,309 ಮನೆಗಳನ್ನು ಪೂರ್ಣಗೊಳಿಸಿ ಹಂಚಲಾಗಿದೆ. ಅದೇ ರೀತಿ ಪ್ರಧಾನಮಂತ್ರಿ ಗ್ರಾಮೋದಯ ವಸತಿ ಯೋಜನೆಯಡಿಯಲ್ಲಿ 24,300 ಮನೆಗಳ ಗುರಿಯನ್ನು ಸರ್ಕಾರ ನಿಗದಿ ಮಾಡಿತ್ತು. ಈ ಪೈಕಿ 20,220 ಮನೆಗಳನ್ನು ಎಲ್ಲಾ ವಿಧದಲ್ಲೂ ಪೂರ್ಣಗೊಳಿಸಿ ಹಂಚಲಾಗಿದೆ. ಅದೇ ರೀತಿ ಪ್ರಧಾನಮಂತ್ರಿ ಗ್ರಾಮೋದಯ ವಸತಿ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 3 ವರ್ಷಗಳಲ್ಲಿ 400 ಮನೆಗಳ ಗುರಿಯನ್ನು ನೀಡಿದ್ದು, ಇದಕ್ಕೆ ವಿರುದ್ಧವಾಗಿ ಹಿಂದಿನ ಶ್ರೇಣಿಯಲ್ಲಿ ಬಾಕಿಯಿದ್ದ ಮನೆಗಳನ್ನು ಸೇರಿಸಿ ಒಟ್ಟು 400 ಮನೆಗಳ

ಯೋಜನೆ ಅಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಈ ಎರಡು ವರ್ಷಗಳಲ್ಲಿ, ಇದರಲ್ಲಿ 2004–05ನೇ ಸಾಲಿಗೆ ಗುರಿಯನ್ನು ನೀಡಿರುವುದಿಲ್ಲ. ಆದರೂ 612 ಮನೆಗಳ ಗುರಿಗೆ ಎದುರಾಗಿ ಹಿಂದಿನ ಶ್ರೇಣಿಯಲ್ಲಿ ಬಾಕಿಯಿದ್ದ ಮನೆಗಳನ್ನು ಸೇರಿಸಿ ಒಟ್ಟು 754 ಮನೆಗಳನ್ನು ಪೂರ್ಣಗೊಳಿಸಿ ಹಂಚಲಾಗಿದೆ. ಮತ್ತು ಉಡುಪಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪ್ರಧಾನಮಂತ್ರಿ ಗ್ರಾಮೋದಯ ವಸತಿ ಯೋಜನೆಯಡಿಯಲ್ಲಿ ಈ ಮೂರು ವರ್ಷಗಳಲ್ಲಿ 202 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು ಇದಕ್ಕೆ ವಿರುದ್ಧವಾಗಿ ಹಿಂದಿನ ಶ್ರೇಣಿ ಬಾಕಿಯಿದ್ದ ಮನೆಗಳನ್ನು ಸೇರಿಸಿ 202ಕ್ಕೆ ಬದಲಾಗಿ 246 ಮನೆಗಳನ್ನು ಪೂರ್ಣಗೊಳಿಸಿ ಹಂಚಲಾಗಿದೆ. ಮತ್ತೊಂದು ಮಾನ್ಯ ಶಾಸಕರದ್ದು ಮುಖ್ಯವಾದ ಪ್ರಶ್ನೆ ಏನೆಂದರೆ ಉಡುಪಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನವಗ್ರಾಮ ಆಶ್ರಯ ಯೋಜನೆಯಡಿಯಲ್ಲಿ ಈ ಎರಡು ವರ್ಷಗಳಲ್ಲಿ 2004–05ನೇ ಸಾಲಿಗೆ ಗುರಿ ನಿಗದಿ ಮಾಡಿರಲಿಲ್ಲ. ಆದರೂ ಕೂಡ 562 ಮನೆಗಳ ಗುರಿಗೆ ಎದುರಾಗಿ ಹಿಂದಿನ ಶ್ರೇಣಿಯಲ್ಲಿ ಬಾಕಿಯಿದ್ದ ಮನೆಗಳನ್ನು ಸೇರಿಸಿ ಒಟ್ಟು 965 ಮನೆಗಳನ್ನು ಪೂರ್ಣಗೊಳಿಸಿ ಹಂಚಲಾಗಿದೆ. ಮತ್ತು ಬಂಟ್ವಾಳ ತಾಲ್ಲೂಕಿನಲ್ಲಿ 2002–03 ರಲ್ಲಿ ಮತ್ತು 2004–05ರ ಅವಧಿಯಲ್ಲಿ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ 78 ಮನೆಗಳನ್ನು ನೀಡಲಾಗಿದೆ. ಈ ಎಲ್ಲಾ ಮನೆಗಳು ಪೂರ್ಣ ಗೊಂಡಿರುತ್ತದೆ. ಈ ಪೈಕಿ 52 ಹೊಸ ಮನೆಗಳು ಹಾಗೂ 26 ದುರಸ್ತಿಗೊಂಡ ಮನೆಗಳೂ ಸೇರಿವೆ. ಅದೇ ರೀತಿ ಬಂಟ್ವಾಳ ತಾಲ್ಲೂಕಿನಲ್ಲಿ 2002–03 ಹಾಗೂ 2003–04ರ ಅವಧಿಯಲ್ಲಿ ನವಗ್ರಾಮ ಆಶ್ರಯ ವಸತಿ ಯೋಜನೆಯಡಿಯಲ್ಲಿ 208 ಮನೆಗಳನ್ನು ನೀಡಲಾಗಿದೆ. ಈ ಪೈಕಿ 154 ಮನೆಗಳು ಪೂರ್ಣ ಗೊಂಡಿದ್ದು, 54 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮಾನ್ಯ ಸದಸ್ಯರು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಕೇಳಿದ್ದಾರೆ. ಅದರ ಪೂರ್ಣ ಮಾಹಿತಿಯನ್ನು ಅನುಬಂಧ–2 ಮತ್ತು 3ರಲ್ಲಿ ಕೊಡಲಾಗಿದೆ. ನಾನು ಇಷ್ಟು ಮಾತ್ರ ತಮ್ಮ ಮೂಲಕ ಭರವಸೆ ಕೊಡುವುದಕ್ಕೆ ಇಚ್ಛಿಸುತ್ತಿದ್ದೇನೆ. ನಾವು ರಾಜ್ಯದಲ್ಲಿ ಹಮ್ಮಿಕೊಂಡಿರತಕ್ಕಂಥ ವಸತಿ ಕಾರ್ಯಕ್ರಮಗಳು, ಅದು ಆಶ್ರಯ ಇರಬಹುದು, ನವಗ್ರಾಮ ಇರಬಹುದು ಅಥವಾ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ ಇರಬಹುದು, ಅದಕ್ಕಿಂತ ಮಿಗಿಲಾಗಿ ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಇರುವಂತಹ ನಿವಾಸಿಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು, ಅವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ಇಷ್ಟು ಹೇಳಿ ಇದು ಮಾನ್ಯ ಸದಸ್ಯರಿಗೆ ತೃಪ್ತಿ ತಂದಿರಬಹುದು ಎಂದು ಭಾವಿಸುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಉಪಾಧ್ಯಕ್ಷರೆ, ನಾನು ಮೂಲಭೂತ ಸೌಕರ್ಯಗಳ ಬಗ್ಗೆ ಕೇಳಿದೆ. ಒಂದೊಂದು ಗ್ರಾಮ ಪಂಚಾಯಿತಿಯಲ್ಲಿ, ಬುಡ್ಡೆ ತಲೆಯಲ್ಲಿ 20ರಿಂದ 40ರವರೆಗೆ ಮನೆಗಳನ್ನು ಕಟ್ಟಿದ್ದಾರೆ. ಅದರಲ್ಲಿ 25 ಪರ್ಸೆಂಟ್ ಜನ ಕೂಡ ವಾಸವಾಗಿಲ್ಲ. ಏಕೆಂದರೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿ ದಾರಿ ದೀಪಗಳು ಇಲ್ಲ. ಅಥವಾ ಹೋಗುವುದಕ್ಕೆ ರಸ್ತೆ ಇಲ್ಲ. ಮನೆಗಳನ್ನು ಮಾತ್ರ ಅಲ್ಲಿ ನಿರ್ಮಾಣ ಮಾಡಿ ಬಿಟ್ಟಿದ್ದಾರೆ. ಅಲ್ಲದೆ ಅದರಲ್ಲಿ ಶೇಕಡಾ 25 ಜನ ವಾಸವಾಗಲಿಲ್ಲ. ಆದುದರಿಂದ ಈ ಯೋಜನೆಯಲ್ಲಿ ಆ ರೀತಿ ಏನಾದರೂ ಸೌಕರ್ಯ ಒದಗಿಸುವಂತಹ ಯೋಜನೆ ಇದೆಯೇ?

ಶ್ರೀ ಕೆ. ರಘುಪತಿಭಟ್: ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ವಿದ್ಯುತ್ ಸಂಪರ್ಕವನ್ನು ಕೊಡಬೇಕಾದರೆ, ಪ್ರತಿ ಮನೆಯವರು ಎರಡು ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು

ವಿದ್ಯುತ್ ಇಲಾಖೆಯವರು ಕೇಳುತ್ತಿದ್ದಾರೆ. ಈಗ ನವಗ್ರಾಮದಲ್ಲಿ ಬಡವರಿಗೆ ಕೊಡುವಂಥಾದ್ದು. ಪ್ರತಿ ಮನೆಯವರು ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ವಿದ್ಯುತ್ ಅನ್ನು ತೆಗೆದುಕೊಳ್ಳಲು ಸಾಧ್ಯವಿದೆಯೇ? ನೀವು ಮೂಲಭೂತ ಸೌಕರ್ಯಗಳೆಲ್ಲವನ್ನು ಒದಗಿಸಿ, ನವಗ್ರಾಮವನ್ನು ಮಾಡಿದರೆ ಮಾತ್ರ ಪ್ರಯೋಜನವಾಗುತ್ತದೆ. ಇಲ್ಲವೆಂದರೆ ಸುಮ್ಮನೆ ಕಾಟಚಾರಕ್ಕೆ ಈ ಕಾರ್ಯಕ್ರಮಗಳು ಆಗುತ್ತವೆ.

ಶ್ರೀ ಆಂಜನಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ನಾನು ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಅವರ ಪ್ರಶ್ನೆ ಇದ್ದದ್ದು ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಮನೆಗಳೆಂಬ ಬಗ್ಗೆ. ನಾನು ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಕೊಟ್ಟಿದ್ದೇವೆ. ಈಗ ಹೊಸದಾಗಿ ಮೂಲಭೂತ ಸೌಕರ್ಯದ ಬಗ್ಗೆ ಹೇಳುತ್ತಿದ್ದಾರೆ. ಆದರೂ ಕೂಡ ಸರ್ಕಾರ ಬಡ ಜನತೆಗೆ ಮೂಲಭೂತ ಸೌಕರ್ಯ ಒದಗಿಸಲು ಬದ್ಧವಾಗಿದೆ. ಅದರ ಬಗ್ಗೆ ನಿರ್ದಿಷ್ಟವಾದಂತಹ ಸ್ಥಳದ ಬಗ್ಗೆ ಮಾಹಿತಿಯನ್ನು ನಮಗೆ ಕೊಟ್ಟರೆ, ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಆದೇಶವನ್ನು ನೀಡಿ, ಅವರಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಉಪಾಧ್ಯಕ್ಷರೇ, ಈಗ ಉದಾಹರಣೆಗಾಗಿ ನನ್ನ ಕ್ಷೇತ್ರದಲ್ಲಿ ಯಾವುದೇ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕಟ್ಟಿರುವಂತಹ ಮನೆಗಳಲ್ಲಿ ಇದುವರೆಗೂ ಮನೆಗಳಿಗೆ ಹೋಗುವುದಕ್ಕೆ ರಸ್ತೆ ಇಲ್ಲ, ವಿದ್ಯುತ್ ಇಲ್ಲ, ಕುಡಿಯುವ ನೀರು ಇಲ್ಲ.

ಶ್ರೀ ಆಂಜನಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಇವತ್ತು ಹೆಚ್ಚಿನ ಅಧಿಕಾರವನ್ನು ಗ್ರಾಮ ಪಂಚಾಯತ್‌ಗೆ ಕೊಟ್ಟಿದೆ. ರಸ್ತೆಯ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ಅದೇ ರೀತಿಯಲ್ಲಿ ವಿದ್ಯುತ್ ಸಂಪರ್ಕದ ಬಗ್ಗೆಯೂ ಗ್ರಾಮ ಪಂಚಾಯತ್‌ಗೆ ವಹಿಸಿರುವುದರಿಂದ ಇದನ್ನು ಗ್ರಾಮ ಪಂಚಾಯತ್‌ನವರು ನೋಡಬೇಕಾಗುತ್ತದೆ. ನಾನು ಹೇಳುವಂಥಾದ್ದು ಏನೆಂದರೆ ಮಾನ್ಯ ಸದಸ್ಯರು ಆ ರೀತಿಯ ಯಾವುದಾದರೂ ಒಂದು ನಿರ್ದಿಷ್ಟವಾದಂತಹ ಊರಿನ ಹೆಸರನ್ನು ಹೇಳಿದರೆ, ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಉಪಾಧ್ಯಕ್ಷರೇ, ನನ್ನ ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿರುವಂತಹ ಯಾವುದೇ ಗ್ರಾಮ ಪಂಚಾಯತ್ ಮೂಲಕ ನಿರ್ಮಾಣವಾಗಿರುವಂತಹ, ಮನೆಗಳಿಗೆ ಇವರು ಮನೆಗಳನ್ನು ಮಾತ್ರ ಕಟ್ಟಿಸಿಕೊಟ್ಟಿದ್ದಾರೆ. ಗುಂಪು ಮನೆಗಳನ್ನು ಮಾತ್ರ ಕಟ್ಟಿಸಿಕೊಟ್ಟಿದ್ದಾರೆ. ಆದರೆ ಅಲ್ಲಿ ಕುಡಿಯುವ ನೀರಿಲ್ಲ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಉಪಾಧ್ಯಕ್ಷರೇ, ಇವರು ಮೂಲಭೂತ ಸೌಕರ್ಯಗಳನ್ನು ಕೊಡದೇ ಇದ್ದ ಮೇಲೆ ನವಗ್ರಾಮ ಯೋಜನೆಯನ್ನು ಏಕೆ ಮಾಡಬೇಕು? ಅದನ್ನು ಮಾಡುವುದೇ ಬೇಡ. ಇದರಿಂದ ಮತ್ತೆ ಬಡವರಿಗೆ ತೊಂದರೆಯನ್ನು ಮಾಡುವುದು ಬೇಡ. ನೀವು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ಮಾತ್ರ ಯೋಜನೆಯನ್ನು ಮಾಡಿ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಉಪಾಧ್ಯಕ್ಷರೇ, ಒಂದೊಂದು ಗ್ರಾಮದಲ್ಲಿ 20ರಿಂದ 40 ಮನೆಗಳನ್ನು ಕಟ್ಟಿಸಿದ್ದಾರೆ. ಆ ಮನೆಗಳಲ್ಲಿ ಇದುವರೆಗೂ ಯಾರೂ ವಾಸವಾಗಿಲ್ಲ. ಅಲ್ಲಿ ವಾಸ ಮಾಡಬೇಕಾದರೆ ಕುಡಿಯುವುದಕ್ಕೆ ನೀರು ಇಲ್ಲ.

ಶ್ರೀ ಅಂಜನಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದನ್ನೆ ಹೇಳುತ್ತಾರೆ. ನಾನು ಕೊಟ್ಟ ಉತ್ತರವನ್ನು ಮತ್ತೆ ಕೊಡುತ್ತಿದ್ದೇನೆ. ಅವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷರು: ಮಾನ್ಯ ಕೆ. ಪದ್ಮನಾಭ ಕೊಟ್ಟಾರಿಯವರೇ, ನಿಮ್ಮ ಕ್ಷೇತ್ರದಲ್ಲಿರುವಂಥ ಸಮಸ್ಯೆಗಳ ಬಗ್ಗೆ ಒಂದು ಪಟ್ಟಿಯನ್ನು ಕೊಡಿ.

ಶ್ರೀ ಅಂಜನಮೂರ್ತಿ: ಅವರು ಪಟ್ಟಿಯನ್ನು ಕೊಟ್ಟರೆ ಮಾಡುತ್ತೇನೆಂದು ಹೇಳಿದ್ದೇನೆ. ಅವರು ಒಂದು ನಿರ್ದಿಷ್ಟವಾದಂತಹ ಪ್ರಕರಣ ಇದ್ದರೆ ಕೊಡಲಿ.

ಉಪಾಧ್ಯಕ್ಷರು: ಕೇಳಿದ್ದನ್ನೇ ಕೇಳಬೇಡಿ. ಬೇರೆ ಏನಾದರೂ ಇದ್ದರೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಎಸ್.ಅಕ್ಕಿ: ಮಾನ್ಯ ಉಪಾಧ್ಯಕ್ಷರೇ, ಇಲ್ಲಿಯವರೆಗೂ ಏನು ನವಗ್ರಾಮಗಳನ್ನು ಕಟ್ಟಿದ್ದಾರೆ. ಅಲ್ಲಿ ಸರಿಯಾಗಿ ಕೆಲಸಗಳು ಆಗಿಲ್ಲ. ಅವುಗಳನ್ನು ತಾವು ತನಿಖೆ ಮಾಡಬೇಕು. ಇಲ್ಲಿಯವರೆಗೂ ಏನು ನವಗ್ರಾಮಗಳನ್ನು ಕಟ್ಟಿದ್ದಾರೆ. ಅಲ್ಲಿ ಯಾರೂ ಹೋಗಿ ವಾಸ ಮಾಡಿಲ್ಲ. ಕೆಲವೊಂದು ಕಡೆಗಳಲ್ಲಿ ತನಿಖೆಯನ್ನು ಮಾಡಬೇಕಾಗುತ್ತದೆ.

ಶ್ರೀ ಅಂಜನಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಎಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಡೆದಿಲ್ಲವೆಂಬ ಬಗ್ಗೆ ನಿರ್ದಿಷ್ಟವಾದಂತಹ ಮಾಹಿತಿ ಇದ್ದರೆ, ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಕಾಮೆಡ್-ಕೆ ಅಡಿಯಲ್ಲಿ ಬರುವ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸ್ನಾತಕೋತ್ತರ (ವೈದ್ಯಕೀಯ) ಪದವಿಗಳು

647 **(6511) ಶ್ರೀ ರಾಜೀಂದ್ರನ್ ಎಸ್. (ಕೆ.ಜಿ.ಎಫ್):** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯಕೀಯ ಕೌನ್ಸಿಲ್ ಅನುಮೋದಿಸಿರುವ: ಪ್ರಕಟಿಸಿರುವ ಒಟ್ಟು ಕೋರ್ಸ್‌ಗಳು ಮತ್ತು ಸೀಟ್‌ಗಳ ಸಂಖ್ಯೆ: (ಕಾಲೇಜುವಾರು ಮತ್ತು ಕೋರ್ಸ್‌ವಾರು ಮಾಹಿತಿಯನ್ನು ಒದಗಿಸುವುದು)

ಆ) ಆ ಸೀಟುಗಳನ್ನು ಪ್ರವೇಶ ನಿಯಮಗಳ ಪ್ರಕಾರವೇ ಪೂರ್ಣವಾಗಿ ಭರ್ತಿ ಮಾಡಲಾಗಿದೆಯೇ: (ಕಾಲೇಜುವಾರು ಅಭ್ಯರ್ಥಿಗಳ ಹೆಸರು, ಮತ್ತು ಅವರು ಆಯ್ಕೆಯಾಗಿರುವ ಕೋರ್ಸ್ ಮತ್ತು ರ್‍ಯಾಂಕಿಂಗ್ ಸಂಖ್ಯೆಯೊಂದಿಗೆ ಒದಗಿಸುವುದು;

ಇ) ಸರ್ಕಾರ : ಸಮಿತಿಯು ಪ್ರತಿ ಕೋರ್ಸ್‌ಗೆ ನಿಗದಿಪಡಿಸಿರುವ ಶುಲ್ಕ ಮತ್ತು ಅಭ್ಯರ್ಥಿಗಳಿಂದ ಸಂಸ್ಥೆಯವರು ಪಡೆದಿರುವ ಮೊತ್ತ (ಶುಲ್ಕ ವಿವರಗಳನ್ನು ಒದಗಿಸುವುದು);

ಈ) ಈ ಕಾಲೇಜುಗಳು ಅಂತಿಮ ಪ್ರವೇಶಪಟ್ಟಿಯನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅನುಮೋದನೆಗಾಗಿ ಕಳುಹಿಸಿವೆಯೇ;

ಉ) ಹಾಗಿದ್ದಲ್ಲಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಆ ಪಟ್ಟಿಯನ್ನು ಅನುಮೋದಿಸಿವೆಯೇ: (ಅಭ್ಯರ್ಥಿಗಳವಾರು ಅನುಮೋದಿತ ಪಟ್ಟಿಯನ್ನು ಒದಗಿಸುವುದು);

ಊ) ಸದರಿ ಪಟ್ಟಿಯನ್ನು ಈಗಲೇ ಕಳುಹಿಸದೇ ಇರುವ ಕಾಲೇಜುಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದೇ?